ಪೇಟೆ ಈ ಮೂರು ತಾಲ್ಲೂಕಿನಲ್ಲಿಯೂ ಹಾದುಹೋಗುವಂಥ ನಾಲೆಗಳನ್ನು ಶೀಘ್ರವಾಗಿ ಪರಿಶೀಲನೆ ಮಾಡಬೇಕೆಂದು ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪುಟ್ಟೇಗೌಡರು ಹೇಳುವಂಥ ವಿಚಾರ ಸತ್ಯ ಇದೆ. ಇದರಲ್ಲಿ ಶ್ರೀ ರಾಮದೇವರ ಉತ್ತರ ನಾಲೆ,ಮಂದಗೆರೆ ಎಡದಂಡೆ ನಾಲೆ, ಹೇಮಗಿರಿ ನಾಲೆಗಳಿಗೆ 50 ಕೋಟಿ ರೂಪಾಯಿಗಳ ಸಪರೇಟ್ ಎಸ್ಟಿಮೇಟ್ ಮಾಡಿ ರೆಡಿಯಾಗಿ ಇಟ್ಟುಕೊಂಡಿದ್ದೇವೆ. ಈ ಸಾರಿ ನಾವು ಅನುದಾನವನ್ನು ಕೊಟ್ಟಿಲ್ಲ. ಕೇವಲ 80 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. 80 ಲಕ್ಷ ರೂಪಾಯಿಗಳಲ್ಲಿ 2 ಲಕ್ಷ ಎಕರೆಗೆ ಇರತಕ್ಕಂಥ ಈ ಹಳೆ ಕೆನಾಲ್‌ಗಳನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ಹೇಳುವಂತಹದ್ದರಲ್ಲಿ ಅರ್ಥ ಇದೆ. ನಾನು ಈ ಅಧಿವೇಶನ ಮುಗಿದಮೇಲೆ ಸಂಪೂರ್ಣವಾಗಿ ನಮ್ಮ ಚೀಫ್ ಇಂಜಿನಿಯರ್, ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಅಸೆಸ್ ಮಾಡಿಸಿ, ಎಸ್ಟಿಮೇಟ್ ಮಾಡಿ, ಎಲ್ಲೆಲ್ಲಿ ವೀಕ್ ಪಾಯಿಂಟ್ ಇದೆ ಎಂಬುದನ್ನು ಐಡೆಂಟಿಫೈ ಮಾಡಿ ಒಂದು ಕಾಂಪ್ರೆಹೆನ್ಸೀವ್ ಸ್ಕೀಂ ಅನ್ನು ನಾವೇನು ಯೂನಿಯನ್ ಗೌರ್ನಮೆಂಟ್‌ಗೆ ಕಳುಹಿಸಿಕೊಟ್ಟಿದ್ದೇವೆ. 187 ಕೋಟಿ ರೂಗಳಿಗೆ ಅದು ಖಂಡಿತವಾಗಿ ಬರುತ್ತದೆ. ಈಗಾಗಲೇ ಎಲ್ಲಾ ರೀತಿಯ ವ್ಯವಹಾರಗಳು ಮುಗಿದಿದೆ. ನಮ್ಮ ಮುಖ್ಯಮಂತ್ರಿಗಳಿಂದಲೂ ಸಹ ಪ್ರಧಾನಮಂತ್ರಿಗಳಿಗೆ ಪತ್ರವನ್ನು ಬರೆಸುತ್ತೇನೆ. ಅದಕ್ಕೋಸ್ಕರವಾಗಿ ಆ ಫಾರ್ಮಲಿಟೀಸ್ ಮುಗಿದಮೇಲೆ ನಾನು ಮುಖ್ಯಮಂತ್ರಿಗಳನ್ನು ಕರೆದುಕೊಂಡುಹೋಗಿ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಈ ಹಣವನ್ನು ನಾವು ಪಡೆದುಕೊಂಡರೆ ಎಂಟುನೂರು ವರ್ಷದ ಕೆನಾಲ್‌ಗಳನ್ನು ಸಂಪೂರ್ಣವಾಗಿ ಮಾಡ್ರನೈಜೇಷನ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅಲ್ಲಿಯವರೆಗೆ ಸಹಕರಿಸಬೇಕೆಂದು ಪುಟ್ಟೇಗೌಡರಲ್ಲಿ ಕೇಳಿಕೊಳ್ಳುತ್ತೇನೆ.

ಗುಬ್ಬಿ ಕ್ಷೇತ್ರದ ನಿಟ್ಟೂರು ಹೋಬಳಿ ಪೋಲಿಸ್ ಠಾಣೆ ಮಂಜೂರಾತಿ

404 - ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಬ್ಬಿ ಕ್ಷೇತ್ರದ ನಿಟ್ಟೂರು ಹೋಬಳಿ ಕೇಂದ್ರವಾಗಿದ್ದು ಇಲ್ಲಿ ಅನೇಕ ಕಾರಣಗಳಿಂದ ಪದೇ ಪದೇ ಚಳುವಳಿ ನಡೆಯುತ್ತಿರುವುದು (ರಸ್ತೆ ತಡೆ - ಬೆಂಕಿ ಇಡುವುದು) ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಬಗ್ಗೆ ಸಾರ್ವಜನಿಕರು, ಶಾಸಕರು ನಿಟ್ಟೂರಿನಲ್ಲಿ ಪೋಲೀಸ್ ಠಾಣೆ ತೆರೆಯಬೇಕೆಂದು ಸುಮಾರು ವರ್ಷಗಳಿಂದ ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಈ ಸಾಲಿನಲ್ಲಿ ಮಂಜೂರು ಮಾಡಲಾಗುತ್ತದೆಯೇ?*

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) 1995ನೇ ಸಾಲಿನಲ್ಲಿ 4 ರಸ್ತೆ ತಡೆ ಪ್ರಕರಣಗಳು ವರದಿಯಾಗಿರುತ್ತದೆ.

ಆ) ಹೌದು.

೫) ಆದ್ಯತೆ, ಅಗತ್ಯತೆ ಮತ್ತು ಹಣಕಾಸಿನ ಲಭ್ಯತೆಯನ್ನು ಅನುಸರಿಸಿ ಕ್ರಮ ಗೆದುಕೊಳ್ಳಲಾಗುವುದು.

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಉಪಾಧ್ಯಕ್ಷರೆ, ಈ ಇಲಾಖೆ ಏಕೆ ಇಷ್ಟು ೀಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದೆ ಎನ್ನುವುದು ಅರ್ಥವಾಗುತ್ತಿಲ್ಲ. ಈ ಪ್ರಶ್ನೆಯನ್ನು ಧಾನಸಭೆಯಲ್ಲಿ ನಾಲ್ಕನೆ ಸಾರಿ ಕೇಳುತ್ತಿದ್ದೇನೆ. ಅಲ್ಲಿ ರಸ್ತೆ ತಡೆ, ಚಳುವಳಿ, ಅನೇಕ ಅಹಿತಕರ ಟನೆಗಳು ನೆಡೆಯುತ್ತಿದೆಯೇ ಎಂದು ನಾನು ಕೇಳಿದ್ದೇನೆ. ಅದಕ್ಕೆ ಇವರ ಉತ್ತರ 1995ನೇ ಸಾಲಿನಲ್ಲಿ ರಸ್ತೆ ತಡೆ ಪ್ರಕರಣಗಳು ವರದಿಯಾಗಿರುತ್ತದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಶಿವಮೊಗ್ಗದ ಕಡೆ ರಾ-ನೆಲ್ಲಿಗೆರೆ-ಮೈಸೂರು ರಸ್ತೆ ಕೂಡುವಂತಹ ಒಂದು ಸ್ಥಳವಾಗಿದೆ, ಇದು ತಮಗೂ ಗೊತ್ತಿರಬಹುದು. ಲ್ಲಿ ಜನಸಂಖ್ಯೆ ಜಾಸ್ತಿ ಇದೆ, ಹೋಬಳಿ ಹೆಡ್ ಕ್ವಾಟ್ರಸ್ ಮತ್ತು ಪ್ರೈಮರಿ ಸ್ಕೂಲ್‌ನಿಂದ ಫಸ್ಟ್ ,ೇಡ್ ಕಾಲೇಜ್‌ನವರೆಗೆ ಇದೆ, ಈಗ ಅದು ವ್ಯಾಪಾರ ಕೇಂದ್ರವಾಗಿದೆ. ಅಲ್ಲಿ ಅನೇಕ ಶಾಸಕರನ್ನು ಡೆ ಹಿಡಿದಿದ್ದಾರೆ, ಕೆಲವು ಮಂತ್ರಿಗಳನ್ನು ಸಹ ತಡೆ ಹಿಡಿದಿರುವಂತಹ ಉದಾಹರಣೆಗಳು ಇದೆ. ುಂತ್ರಿಗಳು ಇಲ್ಲಿಗೆ ಬಂದು ಏನು ಈ ರೀತಿಯಾಗಿದೆ ಎನ್ನುವಂತಹ ಪ್ರಶ್ನೆಯನ್ನು ಹಾಕಿದ್ದಾರೆ. ಹಿಂದಿನ ರ್ಕಾರವು ಬೇಗ ಮಾಡಿಕೊಡುತ್ತೇವೆಂದು ಹೇಳಿದ್ದರು. ಆದರೆ ಈಗ ಬರೀ ನಾಲ್ಕು ತಡೆ ಪ್ರಕರಣಗಳು ುಂದು ಹೇಳಿದ್ದೀರಿ. ಇಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್‌ಗಳನ್ನು ಸುಟ್ಟಿದ್ದಾರೆ. ಇದು ನಿಮ್ಮ ಗಮನಕ್ಕೆ ುಂದಿಲ್ಲವೇ? ತಾವು ಈ ರೀತಿಯಾಗಿ ಉತ್ತರವನ್ನು ಕೊಟ್ಟರೆ ಯಾರಿಗೆ ಅನುಕೂಲ ಆಗುತ್ತದೆ. ನಾವು ಪ್ರಶ್ನೆಯನ್ನು ಕೇಳುತ್ತೇವೆ, ನೀವು ಉತ್ತರವನ್ನು ಕೊಟ್ಟಿದ್ದೀರೆಂದು ನಾವು ಸಮಾಧಾನ ಪಟ್ಟುಕೊಳ್ಳಬೇಕು, ುೀವು ಸಮಾಧಾನ ಪಟ್ಟುಕೊಳ್ಳಬೇಕೆನ್ನುವಂಥಾದ್ದು ಸರಿಯಲ್ಲ. ನೀವು ವಿವರವಾದಂತಹ ಉತ್ತರವನ್ನು ತರಿಸಿಕೊಡಬೇಕು. ಎರಡನೆಯದಾಗಿ ಈ ಬಗ್ಗೆ ಸಾರ್ವಜನಿಕರು, ಶಾಸಕರು, ನಿಟ್ಟೂರಿನಲ್ಲಿ ಪೋಲೀಸ್ ಠಾಣೆ ಬೇಕೆಂದು ಸುಮಾರು ವರ್ಷಗಳಿಂದ ಮನವಿಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ುಂದಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದರೆ ಅದಕ್ಕೆ ಉತ್ತರ "ಹೌದು" ಎಂದು ಕೊಟ್ಟಿದ್ದಾರೆ. ಹಾಗಿದ್ದಲ್ಲಿ ಈ ಸಾಲಿನಲ್ಲಿ ಮಂಜೂರು ಮಾಡಲಾಗುತ್ತದೆಯೇ ಎಂದರೆ ಆದ್ಯತೆ, ಅಗತ್ಯತೆ ಎಂದು ಉತ್ತರ ಇದೆ. ಹಿಂದೆ ಸರ್ಕಾರದವರು ಮಂಜೂರು ಮಾಡುತ್ತೇವೆಂದು ಇದೇ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟು, ಈಗ ಇಲ್ಲಿ ಅಗತ್ಯತೆ ಎಂಬ ಪ್ರಶ್ನೆ ಏಕೆ ಬಂತು? ಆದ್ಯತೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ತಮಗೆ ಹಣದ ಲಭ್ಯತೆ ಹಾಗೂ ನಿಮ್ಮ ಪ್ಲಾನಿಂಗ್‌ನಲ್ಲಿ ಹಣಕಾಸಿನ ಪರಿಸ್ಥಿತಿ ಬಗ್ಗೆ ಇರುತ್ತದೆ. ಅದು ಇರಲಿ, ಈ ಅಗತ್ಯತೆ ಎಂಬುದನ್ನು ಮತ್ತೆ ಉತ್ತರದಲ್ಲಿ ಸೇರಿಸಿದ್ದೀರಲ್ಲಾ, ನಿಮ್ಮಿಂದ ನಾವು ಅಗತ್ಯತೆ ಎಂಬುದನ್ನು ಹೇಳಿಸಿಕೊಳ್ಳಬೇಕೆ? ಆದುದರಿಂದ ದಯಮಾಡಿ ತಾವು ಈ ಅಗತ್ಯತೆ ಎಂಬ ಮಾತನ್ನು ಬಿಟ್ಟುಬಿಡಿ. ಅಲ್ಲಿ ವಿಪರೀತ ಗಲಾಟೆಯಾಗಿದೆ. ಅಲ್ಲಿ ಶಾಸಕರನ್ನು, ಮಂತ್ರಿಗಳನ್ನು ತಡೆ ಹಿಡಿದಿದ್ದಾರೆ. ಸಾರ್ವಜನಿಕರ ಜೀವನ ಅಸ್ತವ್ಯಸ್ತವಾಗುತ್ತಿದೆ. ಇದಕ್ಕೆ ತಕ್ಷಣ ಈ ವರ್ಷವಾದರೂ ಒಂದು ಪೋಲಿಸ್ ಠಾಣೆಯನ್ನು ಮಂಜೂರು ಮಾಡಿ ಕೊಡುತ್ತೀರಾ?

ಶ್ರೀ ಆರ್. ರೋಷನ್‌ಬೇಗ್ : ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸದಸ್ಯರಾದ ಶ್ರೀ ಶಿವನಂಜಪ್ಪನವರು ಈ ವರದಿ ಸರಿಯಾಗಿಲ್ಲ. ಬರೀ ನಾಲ್ಕು ಪ್ರಕರಣಗಳೆಂದು ಆಫಿಶಿಯಲ್

ವರದಿಯಾಗಿರುತ್ತದೆ ಎಂದು ಹೇಳುತ್ತೀರಿ. ಅಲ್ಲಿ ಸಾಕಷ್ಟು ಕೇಸ್‌ಗಳು ಆಗಿದೆ. ಕೆಎಸ್‌ಆರ್‌ಟಿ ಬಸ್‌ಗೆ ಬೆಂಕಿ ಇಟ್ಟಿದ್ದಾರೆನ್ನುವಂಥಾದ್ದು ಹೇಳಿದ್ದಾರೆ. ನಾನು ಹಿರಿಯ ಅಧಿಕಾರಿಗಳು ಯಾರಿದ್ದಾ ಅವರೆಲ್ಲರನ್ನೂ ಕರೆದು ಮೀಟಿಂಗ್ ಮಾಡುತ್ತೇನೆ. ಈಗ ಮಾನ್ಯ ಸದಸ್ಯರು ಪೋಲೀಸ್ ಠಾಣೆಯಾಗಬೇಕೆಂದು ಏನು ಹೇಳಿದ್ದಾರೆ. ಈ ವರ್ಷದಲ್ಲಿ ಏನಾದರೂ ಆದರೆ ಅವರು ಅಲ್ಲಿ ದಾನಿಗಳಿಂ ಕಟ್ಟಡವನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದರೆ ನಾಳೆ ಕುಳಿತುಕೊಂಡು ನಾನು ಇದರ ಬಗ್ಗೆ ಏನಾದರ ಒಂದು ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ತಕ್ಷಣ ಕಟ್ಟಡವನ್ನು ಕೊಡುತ್ತೇ ಮತ್ತು ಆ ಠಾಣೆಗೆ ಬೇಕಾದಂತಹ ಜಾಗವನ್ನು ಒದಗಿಸಿಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ಮೊಕ್ಕಾಪಟ್ಟಣಕ್ಕೆ ಪೋಲೀಸ್ ಠಾಣೆ ಕೊಡಿ ಎಂದು ಕೇಳಿದ್ದೆ. ನಾವೂ ಕೂಡ ಕಟ್ಟಡವನ್ನು ಕೊಡುತ್ತೇವೆ. ನಮಗೂ ಒಂದು ಪೋಲೀಸ್ ಠಾಣೆಯನ್ನು ಕೊಡುತ್ತೀರಾ?

ಶ್ರೀ ಆರ್. ರೋಷನ್‌ಬೇಗ್ : ಪರಿಶೀಲನೆ ಮಾಡುತ್ತೇನೆ.

ಬೆಂಗಳೂರು ನಗರದಲ್ಲಿ ವಾಂತಿ, ಭೇದಿ ಮತ್ತು ಕಾಲರ

405 - ಶ್ರೀ ಎನ್. ರಾಜಣ್ಣ, (ಭಾರತಿನಗರ) : ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಜನವರಿ 97ರಿಂದ ಜೂನ್ 97ರವರೆಗೆ ಎಷ್ಟು ಜನ ಕರುಳ ಬೇನೆ ಹಾಗೂ ಕಾಲರಾದಿಂದ ನರಳುತ್ತಿರುತ್ತಾರೆ?

ಆ) ಈ ಖಾಯಿಲೆಯಿಂದ ಎಷ್ಟು ಜನ ಮರಣ ಹೊಂದಿರುತ್ತಾರೆ? ಎಷ್ಟು ಜನ ಐಸೋಲೇಷನ್ ಆಸ್ಪತ್ರೆಗೆ ಶುಶ್ರೂಷೆಗಾಗಿ ದಾಖಲಾಗಿರುತ್ತಾರೆ?

ಇ) ಹಾಗಿದ್ದಲ್ಲಿ, ಬೆಂಗಳೂರು ಮಹಾನಗರ ಪಾಲಿಕೆಯು ಖಾಯಿಲೆಯಿಂದ ಮರಣ ಹೊಂದಿದವರ ಕುಟುಂಬಗಳಿಗೆ ಪರಿಹಾರ ನೀಡಲಾಗಿದೆಯೇ?

ಈ) ಈ ಖಾಯಿಲೆಯು ಯಾವ ಕಾರಣದಿಂದ ಹೆಚ್ಚಿನ ಆನಾಹುತವಾಗಬಹುದು?

ಉ) ಈ ರೀತಿ ಖಾಯಿಲೆಯನ್ನು ತಡೆಗಟ್ಟಲು ಸರ್ಕಾರವು : ಬೆಂಗಳೂರು ಮಹಾನಗರ ಪಾಲಿಕೆ ಏನು ಕ್ರಮ ಕೈಗೊಂಡಿದೆ?

ಊ) ವರ್ಷ ಪೂರ್ತಿ ಶಾಶ್ವತವಾಗಿ ಈ ಖಾಯಿಲೆ ಹರಡದಂತೆ ತಡೆಗಟ್ಟಲು ಸರ್ಕಾರವು ಯಾವ ಯೋಜನೆಯನ್ನು ರೂಪಿಸಿದೆ?